ಗುಳೇಗುಡ್ಡ ಮತಕ್ಷೇತ್ರದಲ್ಲಿ ಮಹಿಳಾ ಆರೋಗ್ಯ ಸಹಾಯಕಿಯರ ವಸತಿ ನಿಲಯಗಳ ಬಗ್ಗೆ.

42(35) ಶ್ರೀ ರಾಜಶೇಖರ ಶೀಲವಂತ ವೀರಣ್ಣ (ಗುಳೇದಗುಡ್ಡ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ಮೂರು ವರ್ಷಗಳಿಂದ ಗುಳೇದಗುಡ್ಡ ಮತ ಕ್ಷೇತ್ರದಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ನಿರ್ಮಾಣಗೊಂಡ ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ವಸತಿ ನಿಲಯಗಳ ಸಂಖ್ಯೆ ಎಷ್ಟು? (ಮೂರು ತಾಲ್ಲೂಕು ಸೇರಿ)

ಆ) ಅವುಗಳಿಗೆ ಒದಗಿಸಲಾದ ಅನುದಾನ ಎಷ್ಟು?

ಇ) ಈ ಬಗ್ಗೆ ಪೂರ್ಣಗೊಂಡ, ಪ್ರಗತಿಯಲ್ಲಿರುವ, ಕೆಲಸ ಪ್ರಾರಂಭವಾಗದೇ ಇರುವ ಮಹಿಳಾ, ಆರೋಗ್ಯ ಸಹಾಯಕಿಯರ ವಸತಿ ನಿಲಯಗಳ ಸಂಖ್ಯೆ ಎಷ್ಟು?

ಡಾ: ಹೆಚ್.ಸಿ. ಮಹಾದೇವಪ್ಪ (ಆರೋಗ್ಯ ಕುಟುಂಬ ಕಲ್ಯಾಣ ಸಚಿವರು):—

ಅ) ತಾಲ್ಲೂಕುವಾರು ಉಪಕೇಂದ್ರಗಳು

1)	ಬಾಗಿಲಕೋಟೆ	- 6
2)	ಹುನಗುಂದ	- 21
3)	ಬಾದಾಮಿ	- 10
	ಒಟ್ಟು	37

ಆ) ಒಟ್ಟು 27.86 ಲಕ್ಷಗಳು

ಇ) ಒಟ್ಟು 37 ಕೇಂದ್ರಗಳಲ್ಲಿ

1)	ಕಟ್ಟಡ ಪೂರ್ಣಗೊಂಡಿರುವುದು	- 20
2)	ಪ್ರಗತಿಯಲ್ಲಿರುವುದು	- 8
3)	ಕಾಮಗಾರಿ ಕೈಗೊಳ್ಳದಿರುವ ಕೇಂದ್ರಗಳು	- 9